RNU AIR DHARWAD

MARCH 14, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಧಾರವಾಡ ಲೋಕಸಭಾ ಕ್ಷೇತ್ರದ,** 'ಸಂಸದರ ಕ್ರೀಡಾ ಮಹೋತ್ಸವ, 2025–26'ರ ಅಂಗವಾಗಿ, ರಾಷ್ಟ್ರೀಯ ಕುಸ್ತಿ ಪಂದ್ಯಾವಳಿ, ಧಾರವಾಡದ ಕರ್ನಾಟಕ ಕಾಲೇಜು ಆವರಣದ ಮೈದಾನದಲ್ಲಿ ಆಯೋಜಿತವಾಗಿದ್ದು, ಇಂದು ರಾತ್ರಿ ಸಮಾರೋಪಗೊಳ್ಳಲಿದೆ. 'ಫಿಟ್ ಇಂಡಿಯಾ; ಖೇಲೋ ಇಂಡಿಯಾ' ಉಪಕ್ರಮದಡಿ, 'ಸಂಸದ್ ಖೇಲ್ ಮಹೋತ್ಸವ'ವನ್ನು, ದೇಶದ ಎಲ್ಲ ಲೋಕಸಭಾ ಕ್ಷೇತ್ರಗಳ, ಯುವ ಕ್ರೀಡಾ ಪ್ರತಿಭೆಗಳನ್ನು, ಗುರುತಿಸಲು, ಸಂಘಟಿಸಲಾಗಿದೆ. ಕೇಂದ್ರ ಯುವಜನಸೇವೆ ಹಾಗೂ ಕ್ರೀಡಾ ಖಾತೆ ಸಚಿವ, ಮನ್ಸುಖ್ ಮಾಂಡವೀಯ, ವಿಜೇತ ಕುಸ್ತಿಪಟುಗಳಿಗೆ ಬಹುಮಾನ ನೀಡಿ, ಗೌರವಿಸಲಿದ್ದಾರೆ. ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಪಾಲ್ಗೊಳ್ಳಲಿದ್ದಾರೆ.

<><><>

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,** ಧಾರವಾಡ ಜಿಲ್ಲೆಯ, ಸಹಾಯಕ ನಿರ್ದೇಶಕ, ಸದಾನಂದ ಅಮರಾಪೂರ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಧಾರವಾಡ ಲೋಕಸಭಾ ಕ್ಷೇತ್ರದ,** ಸಂಸದರ ಕ್ರೀಡಾ ಮಹೋತ್ಸವದ ಭಾಗವಾಗಿ ಆಯೋಜಿತ, ಕುಸ್ತಿ ಪಂದ್ಯಾವಳಿಯಲ್ಲಿ, ಅಂತಾರಾಷ್ಟ್ರೀಯ ಖ್ಯಾತಿಯ ಕುಸ್ತಿಪಟುಗಳಾದ, ಮಿರ್ಜಾ ಇರಾನ್, ಪುಷ್ಪೇಂದ್ರ ಹರಿಯಾಣ, ದಸರಾ ಕಂಠೀರವ ಶಿವಯ್ಯ ಪೂಜಾರಿ ಹಾಗೂ ಕಾಮೇಶ ಪಾಟೀಲ ಕಂಗ್ರಾಳಿ, ಕರ್ನಾಟಕ ಕೇಸರಿ ಶಿವಾನಂದ ದಡ್ಡಿ, ಮಹಾರಾಷ್ಟ್ರ ಚಾಂಪಿಯನ್, ಪ್ರದೀಪ ಠಾಕೂರ ಸೇರಿ, 73 ಜೋಡಿಗಳ ನಡುವೆ, ಸ್ಪರ್ಧೆ ಇಂದು ಸಂಜೆ ನಡೆಯಲಿದೆ. ಕರ್ನಾಟಕದ ಖ್ಯಾತ 7 ಜೋಡಿ ಮಹಿಳಾ ಕುಸ್ತಿಪಟುಗಳು ಪ್ರಶಸ್ತಿಗಾಗಿ ಸೆಣೆಸಲಿದ್ದಾರೆ.

<><><>

**ರಾಜ್ಯದ ಸರ್ಕಾರಿ ಶಾಲೆ,** ವಸತಿ ಶಾಲೆ ಮತ್ತು ವಸತಿ ನಿಲಯಗಳಲ್ಲಿ, ಕಳೆದ ಮೂರು ವರ್ಷಗಳಲ್ಲಿ, 27 ವಿದ್ಯಾರ್ಥಿಗಳು ಆತ್ಮಹತ್ಯೆ ಗೈಯ್ದಿದ್ದಾರೆ. ಸಮಾಜ ಕಲ್ಯಾಣ ಖಾತೆ ಸಚಿವ, ಎಚ್.ಸಿ. ಮಹಾದೇವಪ್ಪ, ವಿಧಾನ ಪರಿಷತ್ತಿಗೆ ಈ ಮಾಹಿತಿ ನೀಡಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಆತ್ಮಹತ್ಯೆ ತಡೆ ಕಾಯ್ದೆ, 2025ರ ಕರಡು ಸಿದ್ಧಗೊಂಡಿದ್ದು, ಅಂತಿಮ ಹಂತದಲ್ಲಿದೆ ಎಂದು, ಶಾಸಕ ತಿಪ್ಪಣ್ಣಪ್ಪ ಕಮಕನೂರು ಪ್ರಶ್ನೆಗೆ, ಸಚಿವರು ಉತ್ತರಿಸಿದರು.

<><><>

**ಕಳೆದ ಮೂರು ವರ್ಷಗಳಲ್ಲಿ,** ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಬಗ್ಗೆ ಸುಳಿವು ಕೊಟ್ಟ ಮೂವರಿಗೆ, ರಾಜ್ಯ ಸರ್ಕಾರದಿಂದ, ತಲಾ 50 ಸಾವಿರ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ, 50 ಸಾವಿರ ರೂಪಾಯಿ ಬಹುಮಾನ ನೀಡಲಾಗಿದೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ, ಚಾಮರಾಜನಗರದಲ್ಲಿ ತಿಳಿಸಿದ್ದಾರೆ.

<><><>

**ಶಿಕ್ಷಣ ಹಕ್ಕು ಕಾಯ್ದೆ, ಆರ್‌ಟಿ.ಇ. ಅಡಿ,** 2026–27ನೇ ಸಾಲಿನಲ್ಲಿ, ಖಾಸಗಿ ಶಾಲೆಗಳಲ್ಲಿ, ಉಚಿತ ಸೀಟು ಹಂಚಿಕೆಗೆ, ವೇಳಾಪಟ್ಟಿಯನ್ನು, ಶಾಲಾ ಶಿಕ್ಷಣ ಇಲಾಖೆ, ಪರಿಷ್ಕರಿಸಿದೆ. ಏಪ್ರಿಲ್ 9ನೇ ತಾರೀಖಿನ ವರೆಗೆ, ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ.

<><><>

**ಕೇಂದ್ರ ಪುರಸ್ಕೃತ, ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ** ಯೋಜನೆಯ, 22ನೇ ಕಂತು, ಎರಡು ಸಾವಿರ ರೂಪಾಯಿ, ನೇರವಾಗಿ ಫಲಾನುಭವಿ ರೈತರ ಖಾತೆಗಳಿಗೆ, ಜಮೆಯಾಗಿದೆ. ರಾಜ್ಯದ, ಒಟ್ಟು 41 ಲಕ್ಷ 40 ಸಾವಿರದ 106 ಫಲಾನುಭವಿಗಳಿಗೆ, 828 ಕೋಟಿ ರೂಪಾಯಿಗಳ, ಆರ್ಥಿಕ ನೆರವು ದೊರೆತಿದೆ. ಕೋಲಾರ ತಾಲೂಕು, ಅಬ್ಬಣಿ ಗ್ರಾಮದ ಪ್ರಗತಿಪರ ಕೃಷಿಕ ಅಬ್ಬಣಿ ಶಿವಪ್ಪ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಯುಗಾದಿ ಹಬ್ಬದ ಪ್ರಯುಕ್ತ,** ಪ್ರಯಾಣಿಕರ ಅನುಕೂಲಕ್ಕಾಗಿ, ರಾಜ್ಯದ ವಿವಿಧ ನಿಲ್ದಾಣಗಳ ನಡುವೆ, ವಿಶೇಷ ರೈಲುಗಳನ್ನು ಓಡಿಸಲು, ನೈಋತ್ಯ ರೇಲ್ವೆ ನಿರ್ಧರಿಸಿದೆ. ಎಸ್.ಎಂ.ವಿ.ಟಿ. ಬೆಂಗಳೂರು–ಬೆಳಗಾವಿ ವಿಶೇಷ ಎಕ್ಸಪ್ರೆಸ್ ರೈಲು, ಯಶವಂತಪುರ–ವಿಜಯಪುರ ವಿಶೇಷ ಎಕ್ಸಪ್ರೆಸ್, ಶ್ರೀ ಸಿದ್ಧಾರೂಢ ಸ್ವಾಮೀಜಿ, ರೈಲು ನಿಲ್ದಾಣ ಹುಬ್ಬಳಿಯಿಂದ, ಯಶವಂತಪುರಕ್ಕೆ ಒನ್ ವೇ ವಿಶೇಷ ಎಕ್ಸಪ್ರೆಸ್ ರೈಲು, ಓಡಲಿದೆ.

<><><>

**ಸಮಾಜದ ಅಸಮಾನತೆಗಳನ್ನು ಪ್ರಶ್ನಿಸಿ,** ಶೋಷಿತರ ಧ್ವನಿಯಾಗಿ ನಿಂತ, ಸಮಾಜವಾದಿಚಿಂತಕ, ಶಾಂತವೇರಿ ಗೋಪಾಲಗೌಡರ, ಜನ್ಮ ದಿನವಿಂದು. ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಖಾತೆ ಸಚಿವ, ಎಂ.ಬಿ.ಪಾಟೀಲ, ಗೌರವ ನಮನ ಸಲ್ಲಿಸಿದ್ದಾರೆ. ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಆಧರಿಸಿದ, ಸಮಾಜ ನಿರ್ಮಾಣದ ಕನಸು ಕಂಡ, ದಿಟ್ಟ ನಾಯಕ. ಅವರ ಸಮಾಜವಾದಿ ಚಿಂತನೆಗಳು, ಎಲ್ಲರಿಗೂ ಸ್ಫೂರ್ತಿದಾಯಕ, ಎಂದಿದ್ದಾರೆ.

<><><>

**ರಾಜ್ಯದ ಎಲ್ಲ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ**, ಏಕೀಕೃತ ಭೂ ನಿರ್ವಹಣಾ ವ್ಯವಸ್ಥೆ, ಯು.ಎಲ್.ಎಂ.ಎಸ್. ಜಾರಿಯಾಗಲಿದೆ ಎಂದು, ನಗರಾಭಿವೃದ್ಧಿ ಖಾತೆ ಸಚಿವ ಬೈರತಿ ಸುರೇಶ, ವಿಧಾನಸಭೆಗೆ ತಿಳಿಸಿದ್ದಾರೆ. ನಾಗರಿಕರು, ಆನ್ಲೈನ್‌ನಲ್ಲಿ ಇ–ಖಾತೆ ಮಾಹಿತಿ ಸಲ್ಲಿಸಿ, ಪ್ರಮಾಣಪತ್ರ ಪಡೆಯಬಹುದು ಎಂದರು.

<><><>

**ವಚನಕಾರ್ತಿಯರು, ತತ್ವಪದಕಾರ್ತಿಯರು** ಹಾಗೂ ಕೀರ್ತನಕಾರ್ತಿಯರ, ಬಗ್ಗೆ ಮೌಲಿಕ ಹಾಗೂ ತೌಲನಿಕ ಅಧ್ಯಯನಗಳಾಗಬೇಕು ಎಂದು, ಹಿರಿಯ ಕವಯಿತ್ರಿ ಮಾಲತಿ ಪಟ್ಟಣಶೆಟ್ಟಿ ಹೇಳಿದ್ದಾರೆ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆ, ಬೆಂಗಳೂರಿನ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ, ಕನಕ ಅಧ್ಯಯನ ಪೀಠದಲ್ಲಿ, ಬೆಂಗಳೂರಿನ, ಕರ್ನಾಟಕ ಲೇಖಕಿಯರ ಸಂಘದ ಆಶ್ರಯದಲ್ಲಿ ಆಯೋಜಿಸಿದ, 'ಸಾಧಕಿ' ಚಿಂತನ ಸಮಾವೇಶ ಉದ್ಘಾಟಿಸಿ, ಮಾತನಾಡಿದರು. ಒಟ್ಟು 27 ಜಿಲ್ಲೆಗಳಿಂದ, 200ಕ್ಕೂ ಅಧಿಕ ಯುವ ಲೇಖಕಿಯರು ಸಮಾವೇಶದಲ್ಲಿ ಪಾಲ್ಗೊಂಡಿದ್ದಾರೆ.

<><><>

**ಉದ್ಯಮಶೀಲತೆ ಹಾಗೂ ನಾವಿನ್ಯತೆ** ಚಟುವಟಿಕೆ ಉತ್ತೇಜಿಸಲು, ದಿ ಇಂಡಸ್ ಆಂತ್ರಪ್ರಿನ್ಯುವರ್ಸ್ 'ಟೈ' ವತಿಯಿಂದ, ಹುಬ್ಬಳ್ಳಿಯ ಖಾಸಗಿ ಹೋಟೆಲ್‌ನಲ್ಲಿ, ಇಂದು ಮತ್ತು ನಾಳೆ, ಉದ್ಯಮ ಸಮಾವೇಶ ಆಯೋಜಿತವಾಗಿದೆ. 'ವಿಕಾಸದತ್ತ ಉತ್ತರ ಕರ್ನಾಟಕ', ಎಂಬ ಶೀರ್ಷಿಕೆಯಡಿ ಆಯೋಜಿತ ಸಮಾವೇಶದಲ್ಲಿ, ನವೋದ್ಯಮಿಗಳು, ಮಧ್ಯಮ, ಸಣ್ಣ ಹಾಗೂ ಸೂಕ್ಷ್ಮ, ಎಂ.ಎಸ್.ಎಂ.ಇ. ಕೈಗಾರಿಕೋದ್ಯಮಿಗಳು, ಸ್ಟಾರ್ಟಅಪ್ ಇನ್‌ಕ್ಯುಬೇಟರ್ಸ್ ಹಾಗೂ ಕಾರ್ಪೋರೇಟ್ ನೀತಿ ನಿರೂಪಕರು ಪಾಲ್ಗೊಂಡಿದ್ದಾರೆ.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**